ಸಾಲಿನಲ್ಲಿ 14 ಕೋಟಿ 50 ಲಕ್ಷ ಮೀನುಮರಿ ಫೈಗಳನ್ನು ಉತ್ಪಾದಿಸಲಾಗಿದೆ. 1992–93ರ ವಾರ್ಷಿಕ ಗುರಿ 15 ಕೋಟಿ ಫೈ ಮೀನು ಮರಿಗಳು.

ಆ) ರಾಜ್ಯದಲ್ಲಿ ಮೀನುಮರಿ ಉತ್ಪಾದನೆಯ ಬೇಡಿಕೆ ತಕ್ಕಷ್ಟು ಆಗುತ್ತಿಲ್ಲ.

ಇ) 1992–93ನೇ ಸಾಲಿನಲ್ಲಿ 7,75,470 ಕಟ್ಲಾ ಬಿತ್ತನೆ ಮೀನುಮರಿಗಳನ್ನು ಆಂಧ್ರ ಪ್ರದೇಶದಿಂದ ಕೊಂಡುಕೊಳ್ಳಲಾಗಿದೆ.

ರಾಜ್ಯದ ವಯಸ್ಕರ ಶಿಕ್ಷಣಕ್ಕೆ ಕೇಂದ್ರ ಸರ್ಕಾರದಿಂದ ಹಣ ಬಿಡುಗಡೆ

1261: ಶ್ರೀ ಕೆ. ಹರ್ಷಕುಮಾರ್ ಗೌಡ (ಚಾಮರಾಜ):–

ವಯಸ್ಕರ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕೇಂದ್ರ ಸರ್ಕಾರದಿಂದ ಪ್ರತಿವರ್ಷ ರಾಜ್ಯ ವಯಸ್ಕರ ಶಿಕ್ಷಣಕ್ಕೆ ಬಿಡುಗಡೆ ಮಾಡುವ ಹಣವೆಷ್ಟು;

ಆ) ರಾಜ್ಯದಲ್ಲಿ ಎಷ್ಟು ವಯಸ್ಕರ ಶಿಕ್ಷಣ ಕೇಂದ್ರಗಳಿವೆ ?

ಶ್ರೀ ಪ್ರಭಾಕರ ಎಸ್. ರಾಣೆ (ವಯಸ್ಕರ ಶಿಕ್ಷಣ ರಾಜ್ಯ ಸಚಿವರು):–

ಅ) ಕೇಂದ್ರ ಸರ್ಕಾರವು ವಯಸ್ಕರ ಶಿಕ್ಷಣ ಕಾರ್ಯಕ್ರಮಕ್ಕಾಗಿ ಬಿಡುಗಡೆ ಮಾಡುವ ಹಣ ರಾಜ್ಯ ಸರ್ಕಾರ ಹಮ್ಮಿಕೊಳ್ಳುವ ಕಾರ್ಯಕ್ರಮಗಳನ್ನು ಅವಲಂಬಿಸಿರುತ್ತದೆ. ಅದರಂತೆ ಈಗ 1991–92 ಮತ್ತು 1992–93ರಲ್ಲಿ ಬಿಡುಗಡೆ ಆಗಿರುವ ಹಣದ ವಿವರ ಈ ಕೆಳಕಂಡಂತಿದೆ;

ವರ್ಷ	ಕಾರ್ಯಕ್ರಮ	ಕೇಂದ್ರ ಸರ್ಕಾರದಿಂದ ಬಿಡುಗಡೆಯಾದ ಹಣ (ರೂ. ಲಕ್ಷಗಳಲ್ಲಿ)
1991–92	(1) ಗ್ರಾಮೀಣ ಕ್ರಿಯಾತ್ಮಕ ಸಾಕ್ಷರತಾ ಯೋಜನೆ	230.13
	2. ಜನಶಿಕ್ಷಣ ನಿಲಯಗಳು	82.25
1992–93	1. ಜನಶಿಕ್ಷಣ ನಿಲಯಗಳು	82.25

ಇದಲ್ಲದೆ ಸಂಪೂರ್ಣ ಸಾಕ್ಷರತಾ ಆಂದೋಲನವನ್ನು ರಾಜ್ಯದ ಜಿಲ್ಲೆಗಳಲ್ಲಿ ಹಂತ ಹಂತವಾಗಿ ಹಮ್ಮಿಕೊಳ್ಳಲಾಗುತ್ತಿದ್ದು 1990–91 ರಿಂದ ಇಲ್ಲಿಯವರೆಗೆ ಒಟ್ಟು 1466.40 ರೂ. ಲಕ್ಷಗಳನ್ನು ಮತ್ತು ನಿರಂತರ ಶಿಕ್ಷಣಕ್ಕಾಗಿ ರೂ. 197.90 ಲಕ್ಷಗಳನ್ನು ಸಂಬಂಧಿಸಿದ ಜಿಲ್ಲಾ ಸಾಕ್ಷರತಾ ಸಮಿತಿಗಳಿಗೆ ಕೇಂದ್ರ ಸರ್ಕಾರವು ನೇರವಾಗಿ ಬಿಡುಗಡೆ ಮಾಡಿದೆ. ವಿವರ ಕೆಳಕಂಡಂತಿದೆ;

ಕ್ರ.ಸಂ.	ಜಿಲ್ಲೆಗಳು	ಕೇಂದ್ರ ಸರ್ಕಾರದಿಂದ ನೇರವಾಗಿ ಬಿಡುಗಡೆಯಾಗಿರುವ ಹಣ (ರೂ. ಲಕ್ಷಗಳಲ್ಲಿ)	
		ಸಂಪೂರ್ಣ ಸಾಕ್ಷರತಾ ಆಂದೋಲನಕ್ಕಾಗಿ	ನಿರಂತರ ಶಿಕ್ಷಣಕ್ಕಾಗಿ
1.	ದಕ್ಷಿಣ ಕನ್ನಡ	200.00	40.00
2.	ಬಿಜಾಪುರ	300.40	80.00
3.	ರಾಯಚೂರು	215.00	–
4.	ಮಂಡ್ಯ	171.00	27.90
5.	ತುಮಕೂರು	185.00	–
6.	ಶಿವಮೊಗ್ಗ	130.00	50.00
7.	ಬೀದರ್	115.00	–
8.	ಮೈಸೂರು	75.00	–
9.	ಧಾರವಾಡ	75.00	–
	ಒಟ್ಟು	1,466.40	197.90

ಆ) ಈಗ ವಯಸ್ಕರ ಶಿಕ್ಷಣ ಕೇಂದ್ರಗಳು ಇರುವುದಿಲ್ಲ. ಆದರೆ ರಾಜ್ಯದಲ್ಲಿ ಸಂಪೂರ್ಣ ಸಾಕ್ಷರತಾ ಆಂದೋಲನವನ್ನು ಜಾರಿಗೆ ತರಲಾಗಿದೆ.

ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರ ಕಚೇರಿಯಲ್ಲಿ ಕೆಲಸ ಮಾಡುತ್ತಿರುವ ಸಿಬ್ಬಂದಿ ಸಂಖ್ಯೆ

1943: ಶ್ರೀ ಪಿ.ಸಿ. ಸಿದ್ದನಗೌಡರ್ (ಕಲಘಟಗಿ):–

ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಂಗಳೂರಿನಲ್ಲಿ ಸಾರ್ವಜನಿಕ ಶಿಕ್ಷಣ ಆಯುಕ್ತರ ಕಛೇರಿಯಲ್ಲಿ ಕೆಲಸ ಮಾಡುತ್ತಿರುವ ನೌಕರರ ಸಂಖ್ಯೆ ಎಷ್ಟು;

ಆ) ಅದರಲ್ಲಿ ಕಳೆದ ನಾಲ್ಕು ವರ್ಷಗಳಿಗೂ ಹೆಚ್ಚು ಒಂದೇ ಸ್ಥಳದಲ್ಲಿ ಸೇವೆ ಸಲ್ಲಿಸುತ್ತಿರುವ ನೌಕರರ ಸಂಖ್ಯೆ ಎಷ್ಟು; (ಬ ಮತ್ತು ಸಿ ವರ್ಗದ ಪಟ್ಟಿಯನ್ನು ವಿವರಗಳೊಂದಿಗೆ ಒದಗಿಸುವುದು)

ಇ) ಕಳೆದ ನಾಲ್ಕು ವರ್ಷಗಳಿಗೂ ಹೆಚ್ಚು ಒಂದೇ ಸ್ಥಳದಲ್ಲಿ ಸೇವೆ ಸಲ್ಲಿಸುತ್ತಿರುವವರಿಗೆ ಸರ್ಕಾರದ ವರ್ಗಾವಣೆ ಮಾರ್ಗ ಸೂಚಿ ಅನ್ವಯವಾಗುವುದಿಲ್ಲವೆ;

ಈ) ಸರ್ಕಾರದ ವರ್ಗಾವಣೆ ಮಾರ್ಗಸೂಚಿ ಈ ನೌಕರರಿಗೆ ಅನ್ವಯವಾಗುವುದಿದ್ದರೆ ಸರ್ಕಾರದಿಂದ ತೆಗೆದುಕೊಂಡಿರುವ ಕ್ರಮವೇನು ?

ಡಾ. ಹೆಗ್ಗಪ್ಪ ಡಿ. ಲಮಾಣಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):–

ಅ) ಒಟ್ಟು 377 ನೌಕರರು.